1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (378)146
2) ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ.(ಶಿರಾ)
3) ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

1. ಹಿರಿಯೂರು ವಾಣಿ ವಿಲಾಸ ಜಲಾಶಯದ ನೀರಿನ ಸಾಮರ್ಥ್ಯವು **30** ಟಿ.ಎಂ.ಸಿ ಇದ್ದು ಪ್ರತಿ ವರ್ಷ ಈ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಎಷ್ಟು?

ಈ ಜಲಾಶಯದಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

ಈ ಜಲಾಶಯದಲ್ಲಿ ನೀರಿನ ಕೊರತೆ ಇಲ್ಲವೇ?

ಇಷ್ಟು ದೊಡ್ಡ ಪ್ರಮಾಣದ ಜಲಾಶಯ ಸಂಬಂಧವಾಗಿ ಉಪಯೋಗವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇತ್ತೀಚಿನ ವರ್ಷಗಳಲ್ಲಿ ಜಲಾಶಯಕ್ಕೆ ಬರುವ ಒಳ ಹರಿವಿನ ಪ್ರಮಾಣ ಸರಾಸರಿ **3.02** ಟಿ.ಎಂ.ಸಿ ಆಗಿರುತ್ತದೆ.

29,985 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ.

ನೀರಿನ ಕೊರತೆ ಇದೆ.

ಬಂದಿದೆ.

2. ಸ್ಕೀಂ-ಎ ಅಡಿಯಲ್ಲಿ ಚಿತ್ರದುರ್ಗ, ಚಳ್ಳಕೆರೆ ಕಡೆ ನಾಲೆಯನ್ನು ಮಾಡಿ ನೀರು ಹರಿಸುವ ಬದಲು ಈ ಜಲಾಶಯಕ್ಕೆ ನೀರು ಹರಿಸುವುದು ಸೂಕ್ತವಲ್ಲವೆ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?

ಭದ್ರಾ ಮೇಲ್ದಂಡೆ ಯೋಜನೆಯಡಿ ವಾಣಿವಿಲಾಸ ಸಾಗರಕ್ಕೆ ನೀರು ಹರಿಸಿದಲ್ಲಿ ಚಿತ್ರದುರ್ಗ ಮತ್ತು ಚಳ್ಳಕೆರೆ ತಾಲ್ಲೂಕುಗಳ ಹೆಚ್ಚಿನ ಪ್ರದೇಶಗಳು ಎತ್ತರದಲ್ಲಿ ಇರುವ ಕಾರಣ ವಾಣಿವಿಲಾಸ ಸಾಗರದ ನಾಲೆಗಳಿಂದ ಈ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಸಾಧ್ಯವಾಗುವುದಿಲ್ಲ.

<u>ಕರ್ನಾಟಕ ವಿಧಾನ ಸಭೆ</u>

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (376)145
2) ಸದಸ್ಯರ ಹೆಸರು : ಶ್ರೀ ಟಿ.ಜಯಚಂದ್ರ(ಶಿರಾ)
3) ಉತ್ತರಿಸುವ ಸಚಿವರು : (ಶ್ರೀ ಗೋವಿಂದ ಎಂ.ಕಾರಜೋಳ)